ಇದೇ ಆಸೆಯಲ್ಲಿ ಗಂಗಕ್ಕನೂ ಮಗನನ್ನು ಕಳಿಸಿಕೊಟ್ಟಿದ್ದಳು. ಮಿನ್ನನಂತೆ ಉಪ್ಪರಿಗೆ ಮನೆ, ಕಾರಿನ ಕನಸು ಗಂಗಕ್ಕನಿಗೆ ಇರದಿದ್ದರೂ, ದುಬೈ ಹೆಸರಿನಲ್ಲಿ ಮಗನಿಗೊಂದು ಮದುವೆಯನ್ನಾದರೂ ಮಾಡಬಹುದು ಎಂದೆಣಿಸಿದ್ದಳು. ಎಣಿಕೆ ಸುಳ್ಳಾಗಲಿಲ್ಲ. ತಮ್ಮಂಥ ಬಡವರ ಮನೆಯದೇ ತುಂಗಭದ್ರೆ ಇವರ ಮನೆ ತುಂಬಿದ್ದಳು. ಸ್ವಲ್ಪ ಮ್ಯಾಚಿಂಗ್ ಇರಲಿ ಎಂದು ಗಂಗಕ್ಕನೇ ಅವಳಿಗೆ ತುಂಗಾಭವಾನಿ ಎಂದು ಮರುನಾಮಕರಣ ಮಾಡಿದ್ದು. ಹೆಂಡತಿಯನ್ನು ಕರೆದುಕೊಂಡು ಹೋದರೆ ಅಲ್ಲಿ ಸಂಸಾರದ ಖರ್ಚು ಹೆಚ್ಚು ಎಂಬ ಕಾರಣ ನೀಡಿದ ಗಣಪತಿ, ಈಗ ಐದಾರು ವರ್ಷಗಳಿಂದ ತುಂಗೆಯನ್ನು ತಾಯಿಯ ಜೊತೆಗೇ ಇರಿಸಿದ್ದ. ನಡುವೆ ಮೂರು ಬಾರಿ ಬಂದು ಹೋಗಿದ್ದ ಆತ, ಬಂದಾಗೆಲ್ಲ ಅತ್ತೆ–ಸೊಸೆಯರ ಕೈಮೇಲೆ ಒಂದಿಷ್ಟು ಹಣ ಇರಿಸಿ ಹೋಗುತ್ತಿದ್ದ. ಇದರಲ್ಲೇ ಮನೆಗೊಂದಿಷ್ಟು ವ್ಯವಸ್ಥೆ, ಕೂಸಿನ ಆರೈಕೆ ನಡೆದಿತ್ತಾದರೂ, ನಿತ್ಯದ ಖರ್ಚಿಗೆ ಬೇಕಲ್ಲವೆ. ಹಾಗಾಗಿ ಹಪ್ಪಳ, ಸಂಡಿಗೆ ಇತ್ಯಾದಿಗಳ ಕಾಯಕ ಮುಂದುವರೆದಿತ್ತು. ಈ ರೀತಿಯಲ್ಲಿ ಗಂಗಾಭವಾನಿ ಮತ್ತವಳ ಸೊಸೆ ತುಂಗಾಭವಾನಿಯರು ಒಂದು ಸಣ್ಣ ಕೂಸಿನೊಂದಿಗೆ ತಮ್ಮ ರಥ ಎಳೆಯುತ್ತಿದ್ದರು.

★★★

ಹೆಚ್ಚೇನೂ ರಂಗಿಲ್ಲದ ಕಥೆಯೇ ಇಷ್ಟುದ್ದ ಎಳೆದ ಮೇಲೆ, ನಮ್ಮ ಮಾರ್ಬಲ್ ರಾಯರ ಕಥೆ ಹೇಗಿರಬೇಡ! ಅದೇನೂ ಅವರ ಹುಟ್ಟು ಹೆಸರಲ್ಲ. ಅವರಪ್ಪ ಅಮ್ಮ ಇಟ್ಟ ಹೆಸರು ಮಹಾಬಲ ಎಂಬುದಾಗಿ. ನಾಲ್ಕೈದು ಹೆಣ್ಣುಗಳ ನಂತರ ಹುಟ್ಟಿದ ಒಬ್ಬನೇ ಮಗನಾದ್ದರಿಂದ, ಹುಟ್ಟಿನಿಂದಲೇ ಮನೆಯಲ್ಲಿ ಸಾಕಷ್ಟು ಪ್ರಾಮುಖ್ಯತೆ ಗಳಿಸಿದ್ದರು. ಮನೆಯ ಹೆಣ್ಣುಗಳಿಗೆ ಅಷ್ಟಾಗಿ ದೊರೆಯದ ಓದುವ ಸವಲತ್ತು ಇವರಿಗೆ ದೊರೆತಿತ್ತು. ಇವರ ಬಾಯಲ್ಲಿ ಬಂದಿದ್ದೆಲ್ಲಾ ಮನೆಯಲ್ಲಿ ನೆರವೇರುತ್ತಿತ್ತು. ಏನಾದರಾಗಲಿ, ಮಗನನ್ನೊಂದು ಡಾಕ್ಟರು ಮಾಡಿಯೇ ಬಿಡಬೇಕು ಎಂಬುದು ಅವರ ತಂದೆ ನರಸಿಂಹರಾಯರ ಮಹದಾಸೆಯಾಗಿತ್ತು. ಅವರು ಆಗಿನ ಕಾಲದಲ್ಲಿ ಹಳ್ಳಿಯಲ್ಲಿದ್ದೇ ನಾಲ್ಕನೇ ತರಗತಿಯವರೆಗೆ ಕಲಿತವರಾದ್ದರಿಂದ, ತಮ್ಮ ಕುಮಾರ ಕಂಠೀರವ ಡಾಕ್ಟರಿಕೆಯನ್ನಾದರೂ ಕಲಿಯಬೇಡವೇ ಎಂಬುದು ನರಸಿಂಹರಾಯರ ವಾದವಾಗಿತ್ತು. ತಮ್ಮ ಮಾತು ನಡೆಯದಿದ್ದರೆ ಕೆಲವೊಮ್ಮೆ ಹೆಸರಿಗೆ ಚ್ಯುತಿ ಬಾರದಂತೆ ನರಸಿಂಹಾವತಾರವನ್ನೇ ತಾಳುತ್ತಿದ್ದ ಅಪ್ಪನಿಗೆ ಎದುರಾಡಲಾಗದ ಮಹಾಬಲ ಡಾಕ್ಟರಿಕೆ ಓದಿದ್ದೇನೋ ಹೌದು. ಆದರೆ ಊರವರ ಮಾತಿನಂತೆ, ಜನರ ಡಾಕ್ಟರಲ್ಲ, ದನದ್ದು! "ಡಾ. ಮಹಾಬಲ ರಾವ್" ಎಂಬ ಬೋರ್ಡು ಮನೆಗೆ ತಗುಲಿದ ದಿನ ನರಸಿಂಹರಾಯದ ಜೀವನದ ಶ್ರೇಷ್ಠ ದಿನವೆಂದರೆ ಅಡ್ಡಿಯಿಲ್ಲ. "ಯಮ್ಮನೆ ಮಾಣಿ ಡಾಕ್ಟರಿಕೆ ಕಲ್ತಿದ್ದ. ಜನಕ್ಕಾದ್ರೂ ದನಕ್ಕಾದ್ರೂ ಸೂಜಿ ಸುಚ್ಚದು ಒಂದೇ ಬದೀಗೆಯ" ಎನ್ನುತ್ತಾ ಊರಿಗೆಲ್ಲಾ ಫೇಡೆ ಹಂಚಿದ್ದರು. ಮೊದಲಿನಿಂದಲೂ ಸಾಕಷ್ಟು ಜನ, ಧನ–ಕನಕ ಇದ್ದ ಮನೆಯಾದ್ದರಿಂದ "ಡಾ. ಮಹಾಬಲ ರಾವ್" ಅವರ ಪ್ರಾಕ್ಟೀಸ್ ಕುದುರುವ ಬಗ್ಗೆ ಯಾರಿಗೂ ಅಂಥಾ ಅವಸರವೇನೂ ಇರಲಿಲ್ಲ.

ಇಂತಿಪ್ಪ ಮಹಾಬಲನಿಗೆ ಹೆಸರಿಗೆ ತಕ್ಕಂತಹ ಕುಸುಮಳೊಂದಿಗೆ ವಿವಾಹವಾಗಿತ್ತು. ಮದುವೆಯ ಹೊತ್ತಿಗೆ ಉಳಿದೆಲ್ಲಾ ಉಡುಗೊರೆಗಳ ಜೊತೆಗೆ, ಅಪರೂಪದ ರಾಧಾಕೃಷ್ಣರ ಮೂರ್ತಿಯನ್ನು ಕುಸುಮಳ ತಂದೆ ನೀಡಿದ್ದರು.ಆ ಕಾಲದಲ್ಲಿ, ಆ ಪ್ರದೇಶದಲ್ಲಿ ಸ್ವಲ್ಪ ಅಪರೂಪ ಎನಿಸಿದ್ದ ಅಮೃತಶಿಲೆಯ ದೊಡ್ಡ ಮೂರ್ತಿಯದು. ಅದರ ಅಪೂರ್ವ ಸೌಂದರ್ಯಕ್ಕೆ ಮಹಾಬಲ ರಾಯರು ಎಷ್ಟು ಮನಸೋತಿದ್ದರೆಂದರೆ, ಮನೆಗೊಂದೆರಡು ಅಮೃತಶಿಲೆಯ ಟೀಪಾಯಿಗಳನ್ನು ತರಿಸಿದ್ದರು. ಅವರ ಸಂಸಾರ ಬೆಳೆಯುತ್ತಿದ್ದಂತೆ ಅವರ ಅಮೃತಶಿಲೆಯ ಮೋಹವೂ ಬೆಳೆಯುತ್ತಾ ಹೋಯಿತು. ಹುಟ್ಟಿದ ಮಗಳಿಗೆ ಅಮೃತ ಎಂದೇ ಹೆಸರಿಟ್ಟರು. ಮನೆಗೆ "ಅಮೃತಮಹಲು" ಎಂಬ ಹೆಸರನ್ನು